

# ನಕ್ಕುಬಿಡಿ

**ಪುಟ್ಟು:** ಏಯ್ ಕಿಟ್ಟು, ಇವತ್ತು ನಮ್ಮಮ್ಮ ನನ್ನ ಖರ್ಚಿಗೆ 10 ರೂಪಾಯಿ ಕೊಟ್ಟಿದ್ದಾರೆ ಗೊತ್ತಾ!
**ಕಿಟ್ಟು:** ಹೌದಾ, ನಮ್ಮಮ್ಮನೂ ದಿನಾಲೂ 'ಖರ್ಚಿ'ಗೆ ಕೊಡ್ತಾನೇ ಇರ್ತಾರೆ. ಆದರೆ, ನಾನು ಯಾರಿಗೂ ಆ ಬಗ್ಗೆ ಹೇಳೋದಿಲ್ಲಪ್ಪ...!

***

**ಪತಿ:** ಮದುವೆಗೆ ಮುಂಚೆ ನಾನು ಕೇಳಿದಾಗ ಅಡುಗೆ ಮಾಡಲು ಬರುತ್ತಾ ಅಂತ ಕೇಳಿದ್ದೆ ತಾನೇ?
**ಪತ್ನಿ:** ಹೌದು, ಅದಕ್ಕೆ ಅಡುಗೆ ಮಾಡಲು ಬರುತ್ತೆ ಅಂತಾನೂ ಹೇಳಿದ್ದೆ. ಆದರೆ ಮಾಡಿ ಹಾಕ್ತೀನಿ ಅಂತ ಏನಾದರೂ ಹೇಳಿದ್ನಾ?

***



**ಗೀತಾ:** ಏನೇ ನಿನ್ನ ಗಂಡನಿಗೆ ಕೆಲಸ ಹೋಯ್ತಾ?
**ಸೀತಾ:** ಯಾಕೆ?
**ಗೀತಾ:** ಅಲ್ಲಾ ನಿನ್ನ ಗಂಡ ಪ್ಲಾಸ್ಟಿಕ್ ಸರ್ಜನ್ ಅಂತಿದ್ದೆ. ಈಗ ಪ್ಲಾಸ್ಟಿಕ್ ಬ್ಯಾನ್ ಮಾಡಿದ್ದಾರೆ ಅದಕ್ಕೆ.

***

**ಶಿಕ್ಷಕಿ:** ಚಿಂಟು, ಹಕ್ಕಿ ಆಕಾಶದಲ್ಲಿ ಯಾಕಪ್ಪ ಹಾರಾಡುತ್ತೆ?
**ಚಿಂಟು:** ರಸ್ತೇಲಿ ಟ್ರಾಫಿಕ್ ಜಾಮ್ ಜಾಸ್ತಿ ಇರುತ್ತೆ. ಅದಕ್ಕೆ ಆಕಾಶದಲ್ಲಿ ಹಾರಾಡುತ್ತೆ ಮಿಸ್.

***

**ಅತ್ತೆ:** ಮದುವೆಯಾಗಿ ಆರು ವರ್ಷ ಆಯ್ತು. ಇನ್ನೂ ಮಕ್ಕಳಾಗಿಲ್ಲ. ಸಮಸ್ಯೆ ನಿನ್ನಲ್ಲೇ ಇರೋದು. ಅದಕ್ಕೆ ನನ್ನ ಮಗನಿಗೆ ಬೇರೆ ಮದುವೆ ಮಾಡ್ತೀನಿ. ಡೈವೋರ್ಸ್ ಕೊಡು.
**ಸೊಸೆ:** ಮದುವೆ ಮಾಡಿಸಬೇಕಿರುವುದು ನಿನ್ನ ಮಗನಿಗಲ್ಲ ಅತ್ತೆ ನನಗೆ. ಸಮಸ್ಯೆ ಇರೋದು ನನ್ನಲ್ಲಿ ಅಲ್ಲ. ನಿಮ್ಮ ಮಗನಲ್ಲಿ. ನೋಡಿ ಡಾಕ್ಟರ್ ರಿಪೋರ್ಟ್!

***




**ಮಗ:** ಅಪ್ಪ, ನಾನು ನಿಮ್ಮ ಮದುವೆಯ ಒಂದೇ ಒಂದೇ ಫೋಟೊದಲ್ಲೂ ಇಲ್ಲ. ಯಾಕಪ್ಪ, ನಿಮ್ಮ ಮದುವೆಗೆ ನನ್ನನ್ನ ಕರೆದುಕೊಂಡು ಹೋಗಿರಲಿಲ್ವಾ?
**ಅಪ್ಪ:** ಅದು ಹಾಗಲ್ಲ ಕಣೋ. ನಮ್ಮ ಮದುವೆ ವೇಳೆ ನೀನು ನಿಮ್ಮಮ್ಮನ ಹೊಟ್ಟೇಲಿ ಇದ್ದೆ. ಹಾಗಾಗಿ ಫೋಟೊದಲ್ಲಿ ಇಲ್ಲ.
ಅಪ್ಪ–ಮಗನ ಸಂಭಾಷಣೆ ಕೇಳಿದ **ಅಮ್ಮ** ತಲೆ ಚಚ್ಚಿಕೊಂಡಳು.

***

**ಟೀಚರ್:** ನಿಮ್ಮ ಹುಡುಗ ಓದು, ಬರೆಯುವುದರಲ್ಲಿ ಜಾಣ ಇದ್ದಾನೆ. ಆದರೆ, ಅವನು ಕ್ಲಾಸಿನ ಹುಡುಗಿಯರಿಗೆ ತುಂಬಾ ಕಿಚಾಯಿಸುತ್ತಾನೆ.
**ತಾಯಿ:** ಅದು ವಂಶಪಾರಂಪರ್ಯವಾಗಿ ಬಂದಿರೋದು ಟೀಚರ್. ಏನೂ ಮಾಡಕ್ಕಾಗಲ್ಲ ಬಿಡಿ.

***

**ಶಾಸಕರು:** ನೋಡಿ, ಸರ್ಕಾರದ ವತಿಯಿಂದ ಪುಸ್ತಕ, ಬ್ಯಾಗು, ಸೈಕಲ್ಲು, ಬಿಸಿ ಊಟ ಎಲ್ಲಾ ಕೊಡ್ತೀವಿ ಅಂದ್ರೂ ನಿಮ್ಮ ಮಕ್ಕಳನ್ನ ಯಾಕೆ ಶಾಲೆಗೆ ಕಳುಹಿಸಲ್ಲ?
**ಗ್ರಾಮಸ್ಥ:** ಇನ್ನೂ ಯಾವ ಕಾಲದಲ್ಲಿದ್ದೀರಿ ಸಾರ್, ಮೊಬೈಲು, ಬೈಕು, ಸ್ಕೂಟಿ ಕೊಡಿಸಿ. ಸ್ಕೂಲಿಗೆ ಯಾಕೆ ಬರಲ್ಲ ನೋಡಿ!

***

**ವೃದ್ಧಾಶ್ರಮದ ಮೇಲ್ವಿಚಾರಕ:** ನೋಡಿ, ನಿಮ್ಮ ತಂದೆ–ತಾಯಿ ಇಬ್ಬರಿಂದ ನಾಲ್ಕು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ.
**ಗುಂಡ:** ತುಂಬಾ ಜಾಸ್ತಿ ಆಯ್ತು ಅನಿಸುತ್ತೆ.
**ಮೇಲ್ವಿಚಾರಕ:** ನಾವು ಕೊಡೋ ರಸೀದಿ ಜೋಪಾನವಾಗಿ ಇಟ್ಟುಕೊಂಡಿರಿ. ನೀವು ಗಂಡ–ಹೆಂಡತಿ ಇಲ್ಲಿಗೆ ಬರ್ತೀರಲ್ಲಾ, ಆಗ ಬಂದಾಗ ಶೇಕಡಾ 50ರಷ್ಟು ರಿಯಾಯಿತಿ ಕೊಡ್ತೀವಿ.

***

**ಗುಂಡ:** ಏನೇ ಬೆಳಿಗ್ಗೇನೆ ಟಿ.ವಿ. ನೋಡ್ತಾ ಕೂತಿದ್ದೀಯ. ತಿಂಡಿ ರೆಡಿ ಮಾಡೋಲ್ವಾ?
**ಹೆಂಡತಿ:** ರೀ, ಪ್ರಧಾನಿಯವರು ಹೇಳಿಲ್ವಾ ಇಂಧನ ಉಳಿಸಿ ಅಂತ. ಬೇಗ ಹೋಟೆಲ್ಲಿಗೆ ಹೋಗಿ ತಿಂಡಿ ತಂದುಬಿಡಿ.

***

**ಹೆಂಡತಿ:** ರೀ, ಮಾರುಕಟ್ಟೆಗೆ ಈಗ ಕಲರ್ ಕಲರ್ ಕುಕ್ಕರ್ ಬಂದಿದೆ ಅಂತೆ ಕಣ್ರೀ.
**ಗಂಡ:** ಬರಲಿ ಬಿಡು ಏನಾಯ್ತು?
**ಹೆಂಡತಿ:** ಅಲ್ಲಾ, ನನ್ನ ನೈಟಿಗೆ ಮ್ಯಾಚ್ ಆಗೋ ಮೂರು ಕುಕ್ಕರ್ ತರೋಣ ರೀ.

ಸಂಗ್ರಹ: ಮನೋಜ್ ಆರ್. ಕೋಲಾರ


